ನಿರ್ಜನಾರಣ್ಯದಲ್ಲಿ ಗಾಂಧರ್ವವಿವಾಹ ಕ್ರಮದಿಂದ, ಶಿವಸಾಕ್ಷಿಯಲ್ಲಿ ಆದ ವೃತ್ತಾಂತವನ್ನು ಗುಟ್ಟಾಗಿ ಹೇಳಿದಳು. ತಾಯಿ ಅದನ್ನು ಕೇಳಿ ಗದ್ಗದಿಸುತ್ತ, ನಡುಗುತ್ತ ಹೀಗೆ ಹೇಳಿದಳು:

'ಮಗಳೆ ನೀನೇನು ಮಾಡಿದೆ? ಹಾ! ಕುಲದ ಕೀರ್ತಿಯನ್ನು ಮುಳುಗಿಸಿದೆ! ಮರ್ಯಾದೆ ಮೀರಿದೆ! ಯಃಕಶ್ಚಿತ್ (ತೀರ ಕ್ಷುಲ್ಲಕವಾದ) ಭೈರಾಗಿಯನ್ನು ಕಾಡಿನ ಮಧ್ಯೆ ಕದ್ದು ಜೊತೆಗೂಡಿ ನಮ್ಮ ಕುಲದ ಯಶಶ್ಚಂದ್ರಿಕೆಗೆ ನಿಂದನೆಯ ಅಮಾವಾಸ್ಯೆಯನ್ನು ಮೆತ್ತಿ ಹಾಳುಮಾಡಿದೆ!'

ಅದನ್ನು ಕೇಳಿ, ತನ್ನ ಪ್ರಾಣದೇವತೆಯ ನಿಂದೆಗೆ ದುಃಖಿಸುತ್ತಾ,

'ಕೈ ಮುಗಿಯುತ್ತೇನೆ! ತಾಯೆ, ನನ್ನ ಹೃದಯೇಶನನ್ನು ನಿಂದಿಸದಿರು! ನನ್ನನ್ನು ಒಲಿದ ಅರ್ಜುನನು ಜಗದ್ವಿಖ್ಯಾತ ವಂಶದವನು. ಕೀಳು ಕುಲದವನಲ್ಲ. ಯಃಕಶ್ಚಿತ್ ವ್ಯಕ್ತಿಯಲ್ಲ. ಅವನು ಕುಲದ ಕೀರ್ತಿಗೆ ದೇವಲೋಕದ ಬೆಳಕನ್ನು ಹಾಗೂ ನನ್ನನ್ನು ಒಲಿದು ಹೆತ್ತವರಿಗೆ ಸಂತೃಪ್ತಿಯನ್ನು ತರುವನು! ಅವನನ್ನು ಆರು ತಿಂಗಳಲ್ಲಿ ಮಣಿಪುರಕ್ಕೆ ಕರೆದು ತರುತ್ತೇನೆ. ನಮ್ಮ ಧರೆಯು ಅವನ ಪಾದಧೂಳಿಯಿಂದ ಪವಿತ್ರವಾಗುವುದು.

'ಸರ್ವ ವಿಧದಿಂದಲೂ ಲೋಕ ವಿಖ್ಯಾತನಾದ ಪಾರ್ಥನನ್ನು, ದೊರೆಯಾಗುವ ನನ್ನ ಬಾಳಿನ ಸ್ವರ್ಗದಿಂದ್ರನನ್ನು, ಪುರುಷ ಸಿಂಹನನ್ನು ನಿಂದಿಸಬೇಡ.'

ಎಂದು ಕೆಚ್ಚಿನಿಂದ ಹೇಳಿದ ಮಗಳನ್ನು ಆ ಮಹಾರಾಣಿ ಮುದ್ದಿಸಿದಳು. ತನ್ನ ಅಳಿಯನ ಪ್ರಸಿದ್ಧ ಕುಲ ವಿಷಯ ಗೋತ್ರಗಳನ್ನು ಕೇಳಲು, ಅದನ್ನು ಹೇಳಲು ಪುತ್ರಿ ಒಪ್ಪಲಿಲ್ಲ. ಸಿಂಹವನ್ನು ಬಿಟ್ಟು ಬೇರೆಯದನ್ನು ಸಿಂಹಿಣಿ ವರಿಸುವುದೇ ಎಂದು ಹೇಳುತ್ತ ಮಾತೆಯನ್ನು ಮೆಚ್ಚಿಸಿ, ವಿಶ್ವಾಸವನ್ನುಂಟು ಮಾಡಿ ಕಳುಹಿಸಿದಳು.

**ಮುಟ್ಟಿಬಂದುದು ತೇಲಿ ಹತ್ತಿರಕೆ ಷಣ್ಮಾಸದವಧಿ**

ಕಾಲದ ತೇರು ಹಗಲು ಇರುಳುಗಳ ಗಾಲಿಯ ಮೇಲೆ ಅನಂತ ಅವಿಚ್ಛಿನ್ನ ಯಾತ್ರೆಯಲ್ಲಿ ಉರುಳುತ್ತಿತ್ತು. ಕಮಲನೇತ್ರೆ ಚಿತ್ರಾಂಗದೆಯ ಜೀವನವು ದೂರ ನಿರೀಕ್ಷಣೆಯ ಕಠಿನವೂ ಚೂಪು ಆದ ಶೂಲದ ಮೊನೆಯಲ್ಲಿ ತಪಸ್ಸನ್ನು ಮಾಡುತ್ತ ಹರಿಯುತ್ತಿತ್ತು. ಹಾಗಿರಲು ಆರು ತಿಂಗಳ ಅವಧಿ ತೇಲುತ್ತ ಹತ್ತಿರಕ್ಕೆ ಬಂದು ಮುಟ್ಟಿತು.

ಮೇಘರತಿಯು ಜಡವೇಷದಿಂದ ತನ್ನ ತಾಯಿ ಮನೆಯಾದ ಕಡಲ ಒಡಲನ್ನು ನೆನೆದು ನವೆಯುತ್ತಾಳೆ. ಮಳೆಗಾಲದ ಸಮಯವು ಬರಲು, ಸೂರ್ಯನ ಕೃಪೆಯಿಂದ ಮೇಲೆದ್ದು, ವಾಯುವಿನ ಸಹಾಯವನ್ನು ಪಡೆದು ನಡೆಯುವಳು. ಸುರಚಾಪದ (ಕಾಮನಬಿಲ್ಲು) ವರ್ಣಾಭರಣಗಳನ್ನು ಧರಿಸುವಳು. ಸುಂದರ ಸಹ್ಯಾದ್ರಿ ವರನನ್ನು ವರಿಸುವಳು. ಅವನನ್ನು ಎದೆಯಲ್ಲಿ ಸ್ಮರಿಸಿ ಬರಬರುತ್ತ ಹಸುರು ಸಿರಿಯ ಮಲೆನಾಡನ್ನು ಕಂಡು ರೋಮಾಂಚನಗೊಂಡು ಆ ನಾರಿ ಮೇಘರತಿ ಶೋಭಿಸುವಳು.

ಮೈ ಒಡವೆಗಳ ಬಂಗಾರದ ಹೊಳಹೊ ದನಿಯೊ ಎನ್ನುವಂತೆ ಮಿಂಚು ಗೊಂಚಲುಗಳಿಂದ, ಮೊಳಗುವ ಬಳಗದಿಂದ ಹನಿಗಂಪು ತಂಪು ಹಾಗೂ ಬೀಸುಗಳಿಂದ ಕಾರ್ಮುಗಿಲಕಾಂತೆ ರಂಜಿಸುವಳು. ಅವಳನ್ನು ಕಾಣುತ್ತ ಗಿರಿಮದನನು ಎದೆಯ ಆನಂದವನ್ನು ಅನುಭವಿಸುತ್ತ ಉಬ್ಬಿ ಹೋಗುವನು.

ನವಿಲುಗಳು ಕುಣಿಯಲು, ಹಂಸ ಕ್ರೌಂಚ ಪಕ್ಷಿಗಳು ತೃಪ್ತಿಯಿಂದ ನಲಿದಾಡುವವು. ಕೃಷಿಕರು ಕೃತಜ್ಞತೆಯಿಂದ ಹೊಗಳುತ್ತ ಮಣಿಯುವರು. ಬಿಸಿಲ ಬೇಗೆಗೆ ಬೆಂದ ಭುವಿಯು ದೇವಗಂಗೆಯನ್ನು ಮೊಗೆ ಮೊಗೆದು ಈಂಟುತ್ತ ತೃಪ್ತವಾಗುವುದು. ತೃಣರಾಶಿಯು ಹಸುರಿನಿಂದ ಪುಲಕಗೊಂಡಂತೆ ಮೈದೋರುವವು. ಬೀಜಗಳ ಭಣಗುಟ್ಟುವ ಎದೆಯಲ್ಲಿ ಆಶಾ ಅಂಕುರದ ಜೀವದಲೆಯಾಡುವುದು. ಆಗ ಮೇಘಾಂಗನೆಯು ಸಂಭ್ರಮದಿಂದ ಸಹ್ಯಾದ್ರಿದೇವನನ್ನು ಆಲಂಗಿಸುವಳು. ಆದರೆ ಆಹಾ, ಅವಳು ಮರಳಿ ಜಡವಾಗಿ, ಏಕಾಂಗಿನಿಯಾಗಿ ಕಡಲಿನ ಒಡಲಿಗೆ ಹರಿಯುವಳು!

ವರ್ಷ ಪ್ರಣಯ ಯಾತ್ರೆಯ ಆ ಮೇಘರಾಗಿಣಿಗೆ ಪ್ರಯಾಣ ಪ್ರಸಂಗ ಮಾತ್ರದಿಂದ ಉಪಮೆಯಾಗಿ ಚಿತ್ರಾಂಗದೆಯು ಆಪ್ತ ಸಖಿಯರೊಡಗೂಡಿ ಪಾರ್ಥನನ್ನು ಎದುರುಗೊಳ್ಳಲು ಹೊರಟಳು. ಅವನನ್ನು ಬೆರಗುಗೊಳಿಸಿ, ತನ್ನ ಪಿತೃಗಳ ಜೊತೆಗೆ ಮಣಿಪುರದ ಜನರೆಲ್ಲ ಆಶ್ಚರ್ಯಕ್ಕೊಳಗಾಗುವಂತೆ, ಹಿಗ್ಗಿ ನಲಿವಂತೆ ಕರೆತರುವೆನು ಎಂಬ ಆನಂದದಿಂದ ನಡೆದಳು.

ದಿನ ದಿನಕ್ಕೆ ದೂರವು ಕರಗುತ್ತ ಶಿವಗುಡಿಯ ಬನವು ಹತ್ತಿರವಾಯಿತು. ಚಿತ್ರಾಳ ಮನಸ್ಸು ಸವಿ ನೆನಪಿನಿಂದ ಮತ್ತು ಬರಲಿರುವ ಸಗ್ಗ ಸೊಗಸಿನ ಆಸೆಯಿಂದ ತುಂಬಿದ ಗರ್ಭದಂತೆ ತುಂಬಿ ಬಂದಿತು!

**ಮೊದಲ ಮಿಲನದ ಮತ್ತೆ ವಿರಹದ ಶಿವಾಲಯಂ!**

ಅವಳ ಕಣ್ಣಿಗೆ ತಮ್ಮ ಮೊದಲ ಬೇಟದ ಮೊಳಕೆ ಹಣ್ಣಾದ ಕಾನನ ಕಂಡಿತು. ಮೊದಲ ಮೋಹದ ಬಲೆಯನ್ನು ನೇಯ್ದ ತಿಳಿಗೊಳದ ಸ್ಥಳ ಕಂಡಿತು. ಮೊದಲ ಮಿಲನದ ಮತ್ತು ವಿರಹದ ಶಿವಾಲಯ ಕಂಡಿತು. ಅವುಗಳನ್ನು ನೋಡುತ್ತ ಅವಳ ಎದೆಯು – ಹೊನ್ನಿನ ತೆರೆಮೂಡಿ, ಎದ್ದು ದಡಕ್ಕೆ ಅಪ್ಪಳಿಸುವ ಕ್ಷೀರ ಸಮುದ್ರದ ಸಂಭ್ರಮ ಜಲೋಚ್ಛ್ವಾಸದಂತೆ ಉಕ್ಕೇರಿತು.

ಒಂದು ಎಡೆಯಿಂದ ಇನ್ನೊಂದು ಎಡೆಗೆ ಓಡಲಾರದೆ ಓಡುತ್ತ, ಪ್ರಿಯನನ್ನು ಕಾಣುತ್ತೇನೆ ಎನ್ನುವ ಅತ್ಯಾದರದಿಂದ ನೋಡಿದಳು. ಅರಳಿದ ಹೂಗಳನ್ನು ಚುಂಬಿಸುತ್ತ, ಎಲೆಗಳನ್ನು ಮುದ್ದಿಸುತ್ತ ವಿವಿಧ ವರ್ಣಗಳನ್ನು ಮೋಹಿಸಿದಳು. ಗಾಳಿಯು ತೀಡುತ್ತ ಬರಲು ಅದರೊಡನೆ ಸಖಿಯೆಂದು ಆಡಿದಳು. ತಲೆ ತಗ್ಗಿಸಿ ತೂಗಾಡುತ್ತಿದ್ದ ಎಲೆಗಳನ್ನು ವಿನೋದದಿಂದ ಹಿಡಿಸಿದಳು.

ತಾನು ಸ್ನಾನ ಮಾಡಿದ್ದ ತಾವರೆಯ ತಿಳಿಗೊಳದ ನೀರ್ಗನ್ನಡಿಯಲ್ಲಿ ತನ್ನ ಮುಖವನ್ನು ಕಂಡು ಮೆಚ್ಚಿದಳು. ಗೆಳತಿಯರನ್ನು ಕರೆ ಕರೆದು ಒಂದೊಂದು ತಾಣವೂ ಮಹಾ ಕ್ಷೇತ್ರವೆನ್ನುವಂತೆ ತೋರಿಸುತ್ತ ವರ್ಣಿಸಿದಳು; ನಂದನವನಕ್ಕಿಂತ ಇಮ್ಮಡಿ ಸೊಬಗಿನ ನೆಲೆಯೆಂದು ಹೊಗಳಿದಳು. ತಾನು ತಿಳಿಯದ ಯಾವುದನ್ನೊ ಆಲೋಚಿಸುತ್ತ ಅವರಿಗೆ ಇರುವ ಪ್ರಕೃತಿ ಸೌಂದರ್ಯಕ್ಕೆ ವಿಶೇಷತೆಯನ್ನು ನೀಡುತ್ತ ಬಣ್ಣಿಸಿದಳು. ಸೊಬಗಿಲ್ಲದೆಡೆಯನ್ನು ಕಡೆಗಣಿಸಿದಳು. ಸಖಿಯರಿಗೆ ಅಗೋಚರವಾದ ಸ್ವರ್ಗದಲ್ಲಿ ಚಂದ್ರಮುಖಿ ಇದ್ದು, ಮನಸ್ಸಿನಲ್ಲಿಯೇ ಕಳೆದ ಕಾಲದಲ್ಲಿ ಪುನಃ ಬಾಳಿದಳು!

ಆ ದಿನ ಬೆಳಗಾಯಿತು. ಪತಿಯು ಬರುವ ಅವಧಿಯ ಶುಭದಿನ. ಆರು ತಿಂಗಳ ನಿರೀಕ್ಷಣೆಯು ಫಲಿಸುವ ದಿನ. ಚಿತ್ರಾಂಗದೆಯ ಜೀವನದ ಉದ್ವಿಗ್ನ ನಾಲಗೆಯಲ್ಲಿ ಬೇವುಬೆಲ್ಲದ ದಿನ; ಬೆಳಗಾಯಿತು ಆ ದಿನ! ಶೃಂಗಾರ ಸದನೆಯಾದ ಚಿತ್ರಾಂಗಿಯು ಮನ್ಮಥವೈರಿ ಶಿವನಿಗೆ ಪೂಜೆ ಮಾಡಿ ಮಧುರ ಮಂಗಲ ಸಂಗೀತದಿಂದ ಸ್ತುತಿಸಿದಳು. ಪಾರ್ಥದೇವನನ್ನು ಸ್ವಾಗತಿಸುವ ಉತ್ಸಾಹದಿಂದ ಲಲಿತಾಂಗಿಯರ ಜೊತೆಗೂಡಿ ವಿಪಿನರಂಗವನ್ನು ಪ್ರವೇಶಿಸಿದಳು.

ದಿಕ್ಕುದಿಕ್ಕುಗಳಲ್ಲಿ ಅಲೆದಾಡುತ್ತ, ಬಳಲಿಕೆಯನ್ನು ಗಣನೆಗೆ ತೆಗೆದುಕೊಳ್ಳದೆ ಬೆಟ್ಟದ ತುದಿಗೆ ಏರಿದಳು. ಅನ್ವೇಷಣಾ ದೃಷ್ಟಿಯಿಂದ ಕಂದರವನ್ನು ನೋಡಿದಳು. ನರನಾಮದ ಅರ್ಜುನನಿರಲಿ, ನರನೋರ್ವನೂ ಕಾಣಿಸದಿರಲು ನಿಟ್ಟುಸಿರು ಬಿಟ್ಟಳು. ಕಲ್ಗೋಡಿನ ತುದಿಗೆ ಏರಿ ಕಾಯ್ದಳು.

ಚಿತ್ರಾಳು ಆಸೆ ತುಂಬಿದ ದೃಷ್ಟಿಯನ್ನು ಬೀರುತ್ತ ಇರಲು ನಿಧಾನ ನಿಧಾನವಾಗಿ ನೆರಳು ಉರುಳುತ್ತ ಹೊತ್ತು ಏರುತ್ತಿತ್ತು. ಹಗಲೇರುತ್ತಿದ್ದಂತೆ ಅವಳ ಹೃದಯ ಸರೋವರವು ಕಾತರತೆಯೆಂಬ ಗಾಳಿಯ ಹೊಡತಕ್ಕೆ ಕದಡಿಹೋಯಿತು. ಕಣ್ಣೀರು ತುಳುಕಿತು. ಕೆಳದಿಯರ ಸಂತೈಕೆಯು ಮೂದಲಿಕೆಯಂತಾಯಿತು. ಅಬಲೆಯು ತಂದೆ ತಾಯಿಯರಿಗೆ ಕೊಟ್ಟ ವಚನವನ್ನು ನೆನೆದು ಮರುಗಿದಳು, ದೀನದುಃಖದಲ್ಲಿ ಕೊರಗಿದಳು.

ಹೀಗಿರುವಾಗ, ಒಲವಿನ ಕೊಲೆಯಲ್ಲಿ ಆದ ಕೆಮ್ಮುಗಿಲ ರಕ್ತದ ಕೆಸರಿನಲ್ಲಿ ಪಶ್ಚಿಮ ದಿಕ್ಕಿನಲ್ಲಿ ಹೊತ್ತು ಆವರಿಸಿ ಮುಳುಗಿತು. ಗರ್ಭಿಣಿಯ ಹೃದ್ಗರ್ಭದಲ್ಲಿ ನಿರಾಶೆ ದಟ್ಟಯಿಸಿ ಕವಿಯುವಂತೆ ರಾತ್ರಿ ಕವಿದು ಬಂತು.

**ಮಣಿಪುರಕೆ ಪಿಂತಿರುಗಿ ಬಂದಳತಿಭೀಷಣ ಮನಃಸ್ಥಿತಿಯಲ್ಲಿ!**

ಹೇ ಆಶಾವಿಲಾಸಿನಿಯೆ, ರಾತ್ರಿಗೆ ನಕ್ಷತ್ರವು ಬರುವಂತೆ ನಿರಾಶೆಯಾದಾಗ ನೀನು ಬರುವೆ. ನಿನ್ನ ಅಮೃತಪಾಶದಿಂದಲೇ ಮೃತ್ಯುವು ಈ ಭುವನದ ಕಹಿಯಾದ ಜೀವನದಿಂದ ಅಡಿಗಡಿಗೆ ಹಿಮ್ಮೆಟ್ಟುತ್ತಿದೆ. ಬಡತನದ ಕಣ್ಣಿಗೆ ಸಂಪತ್ತಿನ ಕನಸು ನೀನು. ರಾಮಗಿರಿ ಆಶ್ರಮದ ವಿರಹಿ ಯಕ್ಷನ ಮುಂದೆ ಮೇಘದೂತನು ನೀನು. ಪ್ರಣಯಕ್ಕೆ ಭರವಸೆ ನೀನು. ಬೆಂದ ಕುದಿವೆದೆಯ ಮನುಷ್ಯರಿಗೆ ಈ ಧರೆಯ ಸಂಕಟದ ಎದುರುಪರದ ಸ್ವರ್ಗವನ್ನು ಒಡ್ಡಿ ಸಂತೋಷವಾಗಿಡುತ್ತಿರುವೆ! ಚಿತ್ರಾಂಗಿಯ ಎದೆತಾವರೆ ಕಣ್ಣ ಕುದಿನೀರಿನಲ್ಲಿ ಬೇಯಲು, ಆಶಾವಿಲಾಸಿನಿಯ ಕೃಪೆಯಿಂದ ಆ ರಾತ್ರಿಯನ್ನು ಕಳೆದಳು.

ಆಶೆಯು ನಿರೀಕ್ಷಣೆಯ ಮೊನೆಯ ಮೇಲೆ ಮೈದೋರುತ್ತ ಗಗನಮಧ್ಯಕ್ಕೆ ಏರುತ್ತ, ಮತ್ತೆ ಮರುದಿನ ಹತಾಶ ಅಂಧತೆಯ ಬಿಲಕ್ಕೆ ಉರುಳಿತು.